ನೇಪಾಳದಲ್ಲಿ ಆಯ್ದ ಎಳೆಯ ಹುಡುಗಿಯರನ್ನು ‘ಕುಮಾರಿ’ ಹೆಸರಿನಲ್ಲಿ ಜೀವಂತ ದೇವರ ರೂಪದಲ್ಲಿ ಕಾಣಲಾಗುತ್ತದೆ. ಈ ಕುಮಾರಿಯರನ್ನು ದುರ್ಗೆಯ ಅಂಶವೆಂದು ಅಲ್ಲಿನ ಜನ ನಂಬುತ್ತಾರೆ, ಆರಾಧಿಸುತ್ತಾರೆ. ಐದು ವರ್ಷದೊಳಗಿನ ಆಯ್ದ ಹೆಣ್ಣುಮಗುವಿನಲ್ಲಿ ದೈವತ್ವ ಗುರುತಿಸಿ, ತಾಯ್ತಂದೆ–ಬಳಗ–ಸಮಾಜದಿಂದ ದೂರವಿಟ್ಟು ‘ಕುಮಾರಿ ಘರ್’ನಲ್ಲಿ ಬೆಳೆಸಲಾಗುತ್ತದೆ. ಜನರಿಗೆ ‘ದರ್ಶನ’ ಕೊಡುವುದೇ ಅವಳ ಕೆಲಸ.

# ಹಿಮಕಣಿವೆಯ ಶೀತಲ ರಹಸ್ಯಗಳು

■ ಡಾ. ಎಚ್.ಎಸ್. ಅನುಪಮಾ



ಉತ್ಸವದ ಸಂದರ್ಭದಲ್ಲಿ ಸಾರ್ವಜನಿಕರ ನಡುವೆ ‘ಕುಮಾರಿ’

ಜಗತ್ತಿನ ಅತಿ ಎತ್ತರದ ಶಿಖರಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡ, 200X800 ಕಿ.ಮೀ. ವಿಸ್ತಾರದ, ಭಾರತದ ಕೊರಳ ಬುಡದ ತಗ್ಗು ತುಂಬುವಂತೆ ಭೂಪಟದಲ್ಲಿ ಕಾಣುವ ದೇಶ ನೇಪಾಳ. ಆಸ್ತಿಕರಿಗೆ ದೇವಭೂಮಿಯಂತೆ, ಚಾರಣಪ್ರಿಯರಿಗೆ ಸವಾಲೆಸೆದು ಆಹ್ವಾನಿಸುವ ಶಿಖರಗಳ ತವರಿನಂತೆ, ಪ್ರಕೃತಿಪ್ರಿಯರಿಗೆ ಅತಿಸುಂದರ ಭೂದೃಶ್ಯಗಳ ತಪ್ಪಲಿನಂತೆ, ಹಿಂದೂ ರಾಷ್ಟ್ರಾಭಿಮಾನಿಗಳಿಗೆ ವಿಸ್ತರಿಸಬೇಕಾದ ವಸಾಹತುವಿನಂತೆ, ಬೌದ್ಧರಿಗೆ ಶಾಕ್ಯಮುನಿ ಬುದ್ಧನ ಜನ್ಮಭೂಮಿಯಂತೆ, ಕಳ್ಳಕಾಕರಿಗೆ–ವ್ಯಸನಿಗಳಿಗೆ ಶಿಕ್ಷೆ ತಪ್ಪಿಸಿಕೊಳ್ಳುವ ಅಡ್ಡದಾರಿಯಂತೆ – ಅವರವರ ಭಾವಭಕುತಿಗೆ ತಕ್ಕಂತೆ ವಿಭಿನ್ನ ಯೋಚನೆಗಳನ್ನು ಸ್ಫುರಿಸುವ ಶಕ್ತಿ ಆ ನೆಲಕ್ಕಿದೆ. ಹಿಮವತ್ಪರ್ವತಗಳಲ್ಲಿ ಹುಟ್ಟಿ ವರ್ಷಪೂರ್ತಿ ಹರಿಯುವ ನದಿಗಳು, ಅವು ನಿರ್ಮಿಸಿರುವ ಬೃಹತ್ ಕಮರಿಗಳು, ಭೋರಿಟ್ಟು ಹರಿಯುವಾಗ ಹೊತ್ತು ತರುವ ಸಾಲಿಗ್ರಾಮವೆಂಬ ನಯಸು ಅಗ್ನಿಶಿಲೆಯ ಪಳೆಯುಳಿಕೆ, ಸಹಜವಾಗಿ ಬೆಳೆಯುವ ರುದ್ರಾಕ್ಷಿ ಗಿಡ, ಎಲ್ಲೆಲ್ಲೂ ರಕ್ತಕೆಂಪು ಬಣ್ಣದ ಬಟ್ಟೆ ಧರಿಸಿರುವ ಸುಂದರಿಯರು, ಶಾಕ್ತ–ಶೈವ–ವಜ್ರಯಾನ–ನಾಥವೇ ಮೊದಲಾದ ಹಿಂದೂ–ಬೌದ್ಧ–ಜೈನ ಧರ್ಮದ ಪಂಥಗಳ ಕೂಡು ಬಾಳುವಿಕೆ ಮುಂತಾದ ಅನೇಕ ಕುತೂಹಲಕರ ಸಂಗತಿಗಳ ತವರು ನೇಪಾಳ. ನಾಲಕ್ಕೂ ದಿಕ್ಕುಗಳಿಂದ ಪರ್ವತಗಳು ಸುತ್ತುವರೆದ ಈ ಭೂಬಂಧಿತ (ಲ್ಯಾಂಡ್ ಲಾಕ್ಡ್) ದೇಶದ ವ್ಯಾಪಾರ ವಹಿವಾಟುಗಳಲ್ಲಿ ತಮ್ಮ ಕೈಮೇಲಾಗಲೆಂದು ನೆರೆಯ ದೇಶಗಳು ಸದಾ ಹಸ್ತಕ್ಷೇಪ ನಡೆಸುತ್ತ ಅಸ್ಥಿರಗೊಳಿಸಿರುವ ರಾಷ್ಟ್ರವೂ ಹೌದು.

ಅಂತಹ ನೇಪಾಳಕ್ಕೆ ಇತ್ತೀಚೆಗೆ ಹೋಗಿದ್ದೆವು. ‘ಹಿಮಪರ್ವತಯಾನ’ದ ರೋಮಾಂಚನದ ಜೊತೆಗೇ ಮನಕಲಕುವ ಕೆಲ ಸಂಗತಿಗಳನ್ನೂ ಎದುರುಗೊಂಡೆವು. ಅವುಗಳಲ್ಲಿ ತುಂಬ ಕಸಿವಿಸಿ ಹುಟ್ಟಿಸಿದ್ದು ಎಳೆ ಹುಡುಗಿಯರನ್ನು ದುರ್ಗೆಯ (‘ತೆಲೆಜು’) ಅಂಶ ಹೊಂದಿದ ‘ಕುಮಾರಿ’ ದೇವರಾಗಿಸಿ ಪೂಜಿಸುವ ಪದ್ಧತಿ. ಕುಮಾರಿ ಎಂದರೆ ‘ಜೀವಂತ ದೇವತೆ’. ವೃತ್ತಿಯಿಂದ ಚಿನ್ನಬೆಳ್ಳಿ ಕೆಲಸ ಮಾಡುವ ನೇವಾರಿಗಳು ನೇಪಾಳದ ಮೂಲ ನಿವಾಸಿಗಳು. ಅವರಿಂದಲೇ ದೇಶಕ್ಕೆ ಆ ಹೆಸರು ಬಂದದ್ದು. ಕುಮಾರಿ ಆರಾಧನೆ ಕಠ್ಮಂಡು ಕಣಿವೆಯ ನೇವಾರರ ಸಂಸ್ಕೃತಿಯಂತೆ.

ಹೆಣ್ಣಿನ ಕೌಮಾರ್ಯವನ್ನು, ಕನ್ಯತ್ವವನ್ನು ದೈವೀಕರಿಸಿ ಸೃಷ್ಟಿಯಾದ ದೈವ ಕುಮಾರಿ. ಐದು ವರ್ಷದೊಳಗಿನ ಆಯ್ದ ಹೆಣ್ಣುಮಗುವಿನಲ್ಲಿ ದೈವತ್ವ ಗುರುತಿಸಿ, ತಾಯ್ತಂದೆ–ಬಳಗ–ಸಮಾಜದಿಂದ ದೂರವಿಟ್ಟು ‘ಕುಮಾರಿ ಘರ್’ನಲ್ಲಿ ಬೆಳೆಸಲಾಗುತ್ತದೆ. ಜನರಿಗೆ ‘ದರ್ಶನ’ ಕೊಡುವುದೇ ಅವಳ ಕೆಲಸ. ಋತುಮತಿಯಾಗುವವರೆಗೆ ಅವಳು ದೇವತೆ, ದೇಹದಿಂದ ರಕ್ತ ಹೊರಹರಿದ ಕೂಡಲೇ ದುರ್ಗೆ ಅವಳನ್ನು ಬಿಟ್ಟು ಹೋಗುವಳಂತೆ! ನಂತರ ತಾಯ್ತಂದೆಯರ ಬಳಿ ಹೋಗುತ್ತಾಳೆ. ನೇಪಾಳದ ವಿವಿಧ ಕಡೆಗಳಲ್ಲಿ ಇಂತಹ